**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 1081/2024**

**ಸಾಕ್ಷಿಯನ್ನು ದಿಃ 27.01.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಬಸವರಾಜು | ಸಿಡಬ್ಲ್ಯೂಃ 7 | ಪಿಡಬ್ಲ್ಯೂಃ 5 |
| ತಂದೆಯ ಹೆಸರು | ನಂಜುಂಡಯ್ಯ | | |
| ವಯಸ್ಸು | 53 ವರ್ಷ | | |
| ಕೆಲಸ | ಕೆ ಎಸ್ ಆರ್ ಟಿ ಸಿ ಬಸ್ ನಿರ್ವಾಹಕ. | | |
| ವಾಸಸ್ಥಳ | ಮೈಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ದಿನಾಂಕಃ 24.07.2024 ರಂದು ಕೆ ಎ 09 ಎಫ್ 5319 ರ ಮೈಸೂರಿನಿಂದ ಪುತ್ತೂರಿಗೆ ಹೋಗುವ ಕೆ ಎಸ್ ಆರ್ ಟಿ ಸಿ ಬಸ್ ನಲ್ಲಿ ನಾನು ನಿವಾರ್ಹಕನಾಗಿ ಆರೋಪಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆವು. ಬೆಳಿಗ್ಗೆ 9.10 ಕ್ಕೆ ಮೈಸೂರು ಬಸ್ ನಿಲ್ದಾಣದಿಂದ ಹೊರಟು ಬೆಳಿಗ್ಗೆ 10.30 ಕ್ಕೆ ಹುಣಸೂರು ಬಸ್ ನಿಲ್ದಾಣಕ್ಕೆ ಬಂದೆವು. ಬಸ್ಸಿನಲ್ಲಿದ್ದ ಪ್ರಯಾಣಿಕರಿಗೆ ಯಾರು ಇಳಿಯಬೇಡಿ ಬಸ್ ಹಿಂದಕ್ಕೆ ತಿರುಗತ್ತದೆ ಎಂದು ಹೇಳಿದೆ. ಚಾಲಕನ ಬಳಿ ಬಸ್ ನ್ನು ರಿವರ್ಸ್ ತೆಗೆಯುವಂತೆ ಹೇಳಿದೆ. ಆ ಸಮಯದಲ್ಲಿ ಯಾವೊಬ್ಬ ಪ್ರಯಾಣಿಕನು ಬಸ್ ನಿಂದ ಇಳಿದಿದ್ದಾಗಲೀ ಹತ್ತಿದ್ದಾಗಲೀ ಗೊತ್ತಿಲ್ಲ. ನಾವು ನಂತರ ಅಲ್ಲಿಂದ ಟಿ ಸಿ ಪಾಯಿಂಟ್ ನಲ್ಲಿ ಎಂಟ್ರಿ ಹಾಕಿಸಿಕೊಂಡು ಮುಂದಕ್ಕೆ ಹೋದೆವು. ಆರೋಪಿ ಬಸ್ ನ್ನು 10 ಕಿಮೀ ವೇಗದಲ್ಲಿ ರಿವರ್ಸ್ ತೆಗೆದರು. 2 ತಿಂಗಳು ಆದ ನಂತರ ನಮ್ಮ ಬಸ್ಸಿನ ಮೇಲೆ ದೂರು ದಾಖಲಾಗಿರುವ ಬಗ್ಗೆ ತಿಳಿದು ಬಂತು. ನಮ್ಮ ಬಸ್ಸಿನಿಂದ ಯಾರಿಗಾದರೂ ಅಪಘಾತವಾದ ಬಗ್ಗೆ ನಾವು ಅವರನ್ನು ಉಪಚರಿಸಿದ ಬಗ್ಗೆ ಗೊತ್ತಿಲ್ಲ. ಗಾಯಾಳುವಿನ ಹೆಸರು ಗೊತ್ತಿಲ್ಲ. ಈ ಕೇಸಿನ ಸಂಬಂಧ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ದಿನಾಂಕಃ 23.07.2024 ರಂದು ನಾನು ಮತ್ತು ಆರೋಪಿ ಮೇಲೆ ಹೇಳಿದ ವಾಹನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆವು ಎಂದರೆ ಸರಿ. ಬಸ್ ಹುಣಸೂರು ಬಸ್ ನಿಲ್ದಾಣಕ್ಕೆ ಬಂದು ನಿಂತಾಗ ನಾನು ಮತ್ತು 3-4 ಪ್ರಯಾಣಿಕರು ಇಳಿದುಕೊಂಡಿದ್ದು ಆ ನಂತರ ಒಬ್ಬ ಹೆಂಗಸು ಇಳಿಯುತ್ತಿದ್ದಾಗ ಆರೋಪಿ ಬಸ್ ನ್ನು ಪ್ಲಾಟ್ ಫಾರಂ ಗೆ ನಿಲ್ಲಿಸಲು ವೇಗವಾಗಿ ಮುಂದಕ್ಕೆ ಚಲಾಯಿಸಿದ ಪರಿಣಾಮ ಆ ಹೆಂಗಸು ಬಸ್ ನಿಂದ ಕೆಳಗೆ ಬಿದ್ದಾಗ ಪ್ರಯಾಣಿಕರು ಕೂಗಿಕೊಂಡಿದ್ದು , ಆರೋಪಿ ಬಸ್ ನ್ನು ನಿಲ್ಲಿಸಿದರು ಎಂದರೆ ಸರಿಯಲ್ಲ. ನಂತರ ನಾವು ಆ ಹೆಂಗಸಿನ ಹತ್ತಿರ ಹೋಗಿ ಸುಧಾರಿಸಿ ನೋಡಿದಾಗ ಆಕೆಯ ತಲೆಯ ಹಿಂಭಾಗಕ್ಕೆ ರಕ್ತ ಗಾಯವಾಗಿದ್ದು , ನಂತರ ಬಸ್ ನಲ್ಲಿ ಬಂದ ಒಬ್ಬ ಹೆಂಗಸು ಆಕೆಯನ್ನು ಸುಧಾರಿಸುತ್ತಿದ್ಧು , ಆಕೆಯ ಹೆಸರನ್ನು ಕೇಳಿದಾಗ ಜಾನಕಿ ಎಂದು ಗಾಯಗೊಂಡವರು ಕಲ್ಕುಣಿಕೆ ಸರ್ಕಲ್ ನ ಹೇಮಾವತಿ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಆರೋಪಿ ಬಸ್ ನ್ನು ವೇಗವಾಗಿ ಹಿಂದಕ್ಕೆ ಚಲಾಯಿಸಿದ ಪರಿಣಾಮ ಅಪಘಾತವಾಗಿದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ಆರೋಪಿ ನನ್ನ ಸಹೋದ್ಯಗಿ ಆಗಿದ್ದ ಕಾರಣ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿಪರ ಶ್ರೀಎನ್ ಎನ್ ಪರ ಶ್ರೀ ಎಸ್ ಎಸ್ ವಕೀಲರಿಂದಃ</u>**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.